ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಆಯುಕ್ತರುರವರ ಕಛೇರಿ, 1ನೇ ಮಹಡಿ, ಎನ್.ಆರ್.ಚೌಕ, ಬೆಂಗಳೂರು-02**

---

**ಸಂಖ್ಯೆ:ಆ.ಆ.ಶಾ/ಪಿ.ಎಸ್‌ಆರ್/ 20 /20-21** ದಿನಾಂಕ:09-04-2020

## ಕಛೇರಿ ಆದೇಶ

ವಿಷಯ: ಬಿಬಿಎಂಪಿ ವ್ಯಾಪ್ತಿಯ ಪೌರಕಾರ್ಮಿಕರ ಕಾಲೋನಿಗಳಲ್ಲಿ ಆರೋಗ್ಯ ತಪಾಸಣೆ-ಕೋವಿಡ್ ಸ್ಕ್ರೀನಿಂಗ್ ಹಾಗೂ ಅರಿವು ಮೂಡಿಸುವ ಕುರಿತು

ಉಲ್ಲೇಖ: ಈ ಕಛೇರಿ ಸಮ ಸಂಖ್ಯೆ:ಬಿ12(2)ಪಿಆರ್/252/~~2019-20~~ 20-21

*****

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಪ್ರತಿ ವರ್ಷ ಡಾ॥ ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿರುತ್ತದೆ. ಆದರೆ ಪ್ರಸಕ್ತ ಸಾಲಿನಲ್ಲಿ ಕೋವಿಡ್-19 ನೋವೆಲ್ ಕೊರೋನಾ ವೈರಸ್ ಮಹಾಮಾರಿ ಇರುವುದರಿಂದ ದಿನಾಂಕ:14-04-2020ರಂದು ಪಾಲಿಕೆ ವ್ಯಾಪ್ತಿಯಲ್ಲಿನ ಪೌರ ಕಾರ್ಮಿಕರುಗಳಿಗೆ ಹಾಗೂ ಅವರ ಕುಟುಂಬದವರಿಗೆ, ಪೌರಕಾರ್ಮಿಕರ ಕಾಲೋನಿಗಳಲ್ಲಿಯೇ ಆರೋಗ್ಯ ತಪಾಸಣೆ-ಕೋವಿಡ್ 19 ಸ್ಕ್ರೀನಿಂಗ್ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

**ಸ್ಥಳ :-ಪೌರಕಾರ್ಮಿಕರ ಕಾಲೋನಿಗಳು**

**ದಿನಾಂಕ:14-04-2020**

ಈ ಸಂಬಂಧ ಪೌರ ಕಾರ್ಮಿಕರ ಕಾಲೋನಿಗಳಿಗೆ ಬಿಬಿಎಂಪಿ ಮತ್ತು ರಾಜ್ಯ ಸರ್ಕಾರದ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಗೊಳಪಡುವ ಯುಪಿಹೆಚ್‌ಸಿ ವೈದ್ಯಾಧಿಕಾರಿಗಳು ಮತ್ತು ತಂಡದವರಿಂದ ಆರೋಗ್ಯ ತಪಾಸಣೆ ನಡೆಸಲು ಆದೇಶಿಸಲಾಗಿದೆ.

ಪಾಲಿಕೆಯ ಎಲ್ಲಾ ವಲಯ ಆರೋಗ್ಯಾಧಿಕಾರಿಗಳು /ಆರೋಗ್ಯ ವೈದ್ಯಾಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಮನ್ವಯ ವಹಿಸಿ (ಪಾಲಿಕೆ ಮತ್ತು ಆ.ಕು.ಕ ಇಲಾಖೆ) ಸದರಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರ್ವಹಿಸಲು ಆದೇಶಿಸಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ಪೂಜ್ಯ ಮಹಾಪೌರರುರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಉಪ ಮಹಾಪೌರರುರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ಆಯುಕ್ತರು, ಆರೋಗ್ಯ & ಕು.ಕ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರುರವರಿಗೆ ಸಲ್ಲಿಸುತ್ತಾ ತಮ್ಮ ಇಲಾಖೆಯ ವೈದ್ಯಾಧಿಕಾರಿಗಳನ್ನು ನಿಯೋಜಿಸಿ ಅಗತ್ಯ ಕ್ರಮ ವಹಿಸುವುದು.
4. ವಿಶೇಷ ಆಯುಕ್ತರು(ಆಡಳಿತ)ರವರಿಗೆ,
5. ವಿಶೇಷ ಆಯುಕ್ತರು(ಆರೋಗ್ಯ/ಯೋಜನೆ)ರವರಿಗೆ ಕಳುಹಿಸಿದೆ.
6. ವಿಶೇಷ ಆಯುಕ್ತರು(ಘನತ್ಯಾಜ್ಯ ನಿರ್ವಹಣೆ)ರವರಿಗೆ.
7. ವಿಶೇಷ ಆಯುಕ್ತರು (ಕಲ್ಯಾಣ)ರವರಿಗೆ ಕಳುಹಿಸಿದೆ.
8. ಜಂಟಿ ಆಯುಕ್ತರು(ಘನತ್ಯಾಜ್ಯ)ರವರಿಗೆ ಕಳುಹಿಸಿದೆ.
9. ವಲಯ ಜಂಟಿ ಆಯುಕ್ತರು (ಪೂರ್ವ/ಪಶ್ಚಿಮ/ದಕ್ಷಿಣ/ಯಲಹಂಕ/ಬೊಮ್ಮನಹಳ್ಳಿ/ಆರ್.ಆರ್.ನಗರ/ ಮಹದೇವಪುರ/ ದಾಸರಹಳ್ಳಿ ರವರಿಗೆ ಮಾಹಿತಿಗಾಗಿ.
10. ಮುಖ್ಯ ಆರೋಗ್ಯಾಧಿಕಾರಿ(ಸಾರ್ವಜನಿಕ ಆರೋಗ್ಯ/ಕ್ಲಿನಿಕಲ್)ರವರಿಗೆ ಅಗತ್ಯ ಕ್ರಮಕ್ಕಾಗಿ.
11. ಎಲ್ಲಾ ವಲಯ ಆರೋಗ್ಯಾಧಿಕಾರಿ(ಸಾರ್ವಜನಿಕ ಆರೋಗ್ಯ/ಕ್ಲಿನಿಕಲ್)ರವರಿಗೆ,
12. ಎಲ್ಲಾ ಆರೋಗ್ಯ ವೈದ್ಯಾಧಿಕಾರಿಗಳು/ಸಂಬಂಧಪಟ್ಟ ಯುಪಿಹೆಚ್‌ಸಿ ವೈದ್ಯಾಧಿಕಾರಿಗಳಿಗೆ ರವರಿಗೆ ಅಗತ್ಯ ಕ್ರಮಕ್ಕಾಗಿ
13. ಕಛೇರಿ ಕಡತಕ್ಕೆ.